C.C. No.- 2123/2023
CW-7/ PW-03

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ**
**ಸಾಕ್ಷಿಯನ್ನು ದಿನಾಂಕ- 21-01-2026 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು- | ಶಂಕ್ರಪ್ಪ |
| ತಂದೆ ಹೆಸರು- | ಆದಪ್ಪ |
| ವಯಸ್ಸು- | 56 ವರ್ಷಗಳು |
| ಉದ್ಯೋಗ- | ಒಕ್ಕಲುತನ |
| ವಾಸಸ್ಥಳ- | ಹೊಬಲ್ ಬಡ್ಡಿ |

**ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-**

ನನಗೆ ಚಾಸಾ-1 ರಿಂದ 6 ರವರ ಪರಿಚಯ ಇರುವುದಿಲ್ಲ. ಆರೋಪಿಯ ಪರಿಚಯ ಇರುವುದಿಲ್ಲ. 1 ನೇ ಆರೋಪಿ ಎನು ಕೆಲಸ ಮಾಡುತ್ತಿದ್ದಾನೆ ಎಂಬ ಮಾಹಿತಿ ಇಲ್ಲ. ನನ್ನನ್ನು ವಿಚಾರಣೆ ಮಾಡಿಲ್ಲ. ನನ್ನ ಮುಂದೆ ಯಾವುದೇ ದಾಳಿ ಮಾಡಿ ಮು.ಮಾಲುಗಳನ್ನು ವಶಪಡಿಸಿಕಕೊಂಡಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ಗುರುತಿಸಲು ಆಗುವುದಿಲ್ಲ. ಮು.ಮಾಲನ್ನು ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

C.C. No.- 2123/2023
CW-7/ PW-03

2. ದಿಃ 28-06-2023 ರಂದು ಸಾಯಂಕಾಲ 04-00 ಗಂಟೆಗೆ ಮುಸಾಪೂರದಿಂದ ಹೊಂಬಳ ಬಂಡಿ ಗ್ರಾಮಕ್ಕೆ ಹೋಗುವಾಗ ಹೊಂಬಳ ಬಂಡಿ ಕ್ರಾಸ್ ಹತ್ತಿರ 1 ನೇ ಆರೋಪಿ ಮಟಕಾ ಜೂಜಾಟದಲ್ಲಿ ತೊಡಗಿದ್ದಾಗ ಕನಕಗಿರಿ ಪೋಲಿಸರು ಹಾಗೂ ಪಂಚರು ಆತನನ್ನು ಹಿಡಿದು ಮಟಕ ಜೂಜಾಟದಿಂದ ಸಂಗ್ರಹಿಸಿದ 780 ರೂ. ನಗದು ಹಣ ಒಂದು ಮಟಕಾ ಚೀಟಿ, ಒಂದು ಬಾಲ್ ಪೆನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ನಂತರ ಮಟಕಾ ಪಟ್ಟಿಯನ್ನು ಯಾರಿಗೆ ಕೊಡುತ್ತಿಯಾ ಎಂದು ವಿಚಾರಿಸಲಾಗಿ ಆತನು 2 ಮತ್ತು 3 ನೇ ಆರೋಪಿಗೆ ಕೊಡುವುದಾಗಿ ತಿಳಿಸಿದನು ಎಂದರೆ ಸರಿಯಲ್ಲ. ನಂತರ ದೊರೆತ ಎಲ್ಲಾ ಮು.ಮಾಲುಗಳನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು 1 ನೇ ಆರೋಪಿಯನ್ನು ವಶಪಡಿಸಿಕೊಂಡನು ಎಂದರೆ ಸರಿ. ಅಲ್ಲಗಳೇದ ಹೇಳಿಕೆಯ ಭಾಗವನ್ನು ನಿಪಿ.2 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ಸಾಮಿಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀಯಾ ಎಂದರೆ ಸರಿಯಲ್ಲ.

ಪೊಲೀಸರು ನಮ್ಮ ಸಮಕ್ಷಮ ದಾಳಿ ಮಾಡಿ ಪಂಚನಾಮೆ ಜರುಗಿಸಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು-**

ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದು ಪಾಟೀಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ